ಶ್ರೀ ಕುಂದೂರು ರುದ್ರಪ್ಪ.—ಭದ್ರಾವತಿ ಹತ್ತಿರ ಹನ್ನೆರಡು ಸಾವಿರ ಎಕರೆ ಭೂಮಿ ನೀರಾವರಿಯಾಗುವುದರಿಂದ ತರಿ ಭೂಮಿ ಇದೆ. ಸಂತೆಬೆನ್ನೂರು ಹೆತ್ತಿರ ಒಂದು ಕೋ-ಆಪರೇಟೀವ್ ಫಾರ್ಮಿಂಗ್ ಸೊಸೈಟಿ ಮಾಡಿ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಲ್ಲಿ ಮಾಡಲು ಸಾಧ್ಯವಿದೆಯೋ ಅಲ್ಲಿ ಮಾಡುತ್ತೇವೆ.

Rural Water Supply Scheme in Mysore State.

*Q.—754. **Sri R. KENCHAPPA** (Pavagada).—

Will the Government be pleased to state :—

(*a*) when the rural water supply scheme in Mysore State was prepared ;

(*b*) the estimated cost of the scheme ;

(*c*) whether estimates of works relating to the supply of water through taps from drinking water wells in rural parts have also been prepared as a part of the said scheme ;

(*d*) if so, the number of villages in Tumkur District in which the estimates of the said scheme have been prepared together with the date on which they were prepared (Talukwar information may be furnished)?

*A.—**Sri RAMAKRISHNA HEGDE** (Minister for Development, Panchayatraj and Co-operation).—

(*a*) During 1963-64.

(*b*) Rs. 24.00 crores.

(*c*) Yes.

(*d*) 675, all durig 1963-64, as detailed below :—

	Taluk		No. of villages
1	Chiknaikanahalli	...	68
2	Tiptur	...	71
3	Pavagada	...	62
4	Madhugiri	...	80
5	Kunigal	...	75
6	Sira	...	73
7	Koratagere	...	59
8	Tumkur	...	53
9	Turuvekere	...	97
10	Gubbi	...	37
		Total ...	675

ಶ್ರೀ ಆರ್. ಕೆಂಚಪ್ಪ.—ಮೈಸೂರು ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನೀರು ಸರಬ ರಾಜು ಮಾಡುವುದಕ್ಕೆ 1963-64 ರಲ್ಲಿ ಒಂದು ಯೋಜನೆ ತಯಾರುಮಾಡಿ ಅದಕ್ಕೆ 24 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಅಂದಾಜು ಮಾಡಲಾಗಿದೆ ಎಂದು ಹೇಳಿದ್ದೀರಿ. ತುಮಕೂರು ಜಿಲ್ಲೆಯಲ್ಲಿ 675 ಗ್ರಾಮಗಳಿಗೆ ನೀರು ಒದಗಿಸುವ ಯೋಜನೆ ಮಾಡಿದೆ ಎಂದು ಸಹ ಉತ್ತರ ಹೇಳಿದ್ದೀರಿ. ಹಾಗಾದರೆ ಇದುವರೆಗೆ ಯಾವ ಯಾವ ಗ್ರಾಮಗಳಲ್ಲಿ ಕಾಮಗಾರಿ ಕೈಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಯಾವ ಗ್ರಾಮಗಳಲ್ಲಿ ಯೋಜನೆ ಕೈಕೊಂಡಿದ್ದೇವೆ ಎಂಬುದಕ್ಕೆ ಒಂದು ಉದ್ದವಾದ ಲಸ್ಟ್ ಇದೆ. ಈ ಲಸ್ಟ್ ಆ ಮೇಲೆ ಕೊಡುತ್ತೇನೆ. ಕಳೆದ ವರ್ಷ ತುಮಕೂರು ಜಿಲ್ಲೆಯಲ್ಲಿ 1963-64ರಲ್ಲಿ ಒಂದು ಲಕ್ಷ ಮೂವತ್ತಾರು ಸಾವಿರ ರೂಪಾಯಿ ಲೋಕರ್ ಡೆವಲಪ್‌ಮೆಂಟ್ ವರ್ಕ್ಸ್ ಸ್ಕೀಂನಲ್ಲಿ ಬಾವಿ ತೆಗೆಯುವುದಕ್ಕೋಸ್ಕರ ಕೊಟ್ಟಿದೆ. ಈ ವರ್ಷ ತುಮಕೂರು ಜಿಲ್ಲೆಯಲ್ಲಿ ಎರಡು ಸ್ಕೀಂ—ಒಂದು ಬಾಣನಂದ್ರದಲ್ಲಿ ಇನ್ನೊಂದು ಬುಕ್ಕಾಪಟ್ಟಣದಲ್ಲಿ ಕೇಂದ್ರ ಸರಕಾರಕ್ಕೆ ತಿಳಿಸಿ ಮಂಜೂರಾದ ಮೇಲೆ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—1963-64ರಲ್ಲಿ ಅಂದಾಜು ಮಾಡಿ ತಯಾರಿಸಿದ ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಯಾವ ಯಾವ ಗ್ರಾಮಗಳು ಇವೆ ?

Sri RAMAKRISHNA HEGDE.—It is an exhaustive list.

ಶ್ರೀ ಆರ್. ಕೆಂಚಪ್ಪ.—ಎಷ್ಟು ವರ್ಷಗಳಲ್ಲಿ ಈ ಯೋಜನೆ ಪೂರ್ತಿ ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬೇರೆ ಪ್ರಶ್ನೆ ಬಂದ ಕಾಲದಲ್ಲಿ ಅದಕ್ಕೆ ಉತ್ತರ ಹೇಳಿದ್ದೇನೆ. ಇದೊಂದು ದೊಡ್ಡ ಬೃಹತ್ ಯೋಜನೆ. 24 ಕೋಟಿ ಅಂದಾಜು ಮಾಡಿದೆ. ಈ ಯೋಜನೆ ಪೂರ್ತಿ ಮಾಡಲು ನಾಲ್ಕೈದು ವರ್ಷವಾದರೂ ಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿನ ಮಂತ್ರಿಮಂಡಳದಲ್ಲಿ ಈ ಖಾತೆ ವಹಿಸಿಕೊಂಡು ಸಚಿವರಾಗಿದ್ದಂಥ ಶ್ರೀ ಟಿ. ಸುಬ್ರಹ್ಮಣ್ಯರವರು, ಐದು ವರ್ಷಗಳಲ್ಲಿ ಪ್ರತಿಯೊಂದು ಗ್ರಾಮಕ್ಕೆ ಕುಡಿಯುವ ನೀರಿನ ಬಾವಿ ಕೊಡುತ್ತೇವೆಂದು ಅಶ್ವಾಸನೆ ಕೊಡಿಸಿದ್ದರು. ಆ ಮಾತನ್ನು ನೀವು ಯಾವಾಗ ಪೂರೈಸಿ ಕೊಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರು ಏನು ಹೇಳಿದ್ದರು ನನಗೆ ಗೊತ್ತಿಲ್ಲ. ಅವರು ಹೇಳಿರಲಿ ಅಥವಾ ಬಿಡಲಿ ಸರಕಾರ ಆದಷ್ಟು ಜಾಗ್ರತೆ ಕುಡಿಯುವ ನೀರಿನ ಬಾವಿಗಳನ್ನು ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪ್ರತಿಯೊಂದು ಗ್ರಾಮಕ್ಕೆ ಒದಗಿಸುವ ಉದ್ದೇಶ ಪಟ್ಟಿದೆ. ಅದನ್ನು ಕಾರ್ಯಗತ ಮಾಡಲು ಸರ್ವ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ನೀರನ್ನು ಗ್ರಾಮಾಂತರ ಪ್ರದೇಶಕ್ಕೆ ಒದಗಿಸುವುದಕ್ಕೆ ನೇರವಾಗಿ ರಾಜ್ಯ ಸರಕಾರ ಪಿ. ಡಬ್ಲ್ಯೂ. ಡಿ. ಇಂತಾಹ ಮುಖಾಂತರ ಕೆಲಸ ಮಾಡಿಸಿ ಕೊಡುತ್ತೀರಾ ಅಥವಾ ಗ್ರಾಮ ಪಂಚಾಯಿತಿಗಳ ಮೂಲಕ ಮಾಡಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ಎರಡು ತರಹದ ಸ್ಕೀಂ ಇವೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಎಂಬುದು ಒಂದು. ಇದು ಒಂದು ದೊಡ್ಡ ಸ್ಕೀಂ. ಪೈಪ್ ವಾಟರ್ ಸ್ಕೀಮಿಗೆ ಎರಡರಿಂದ ಐದು ಲಕ್ಷ ರೂಪಾಯಿವರೆಗೆ ಖರ್ಚು ಬರುತ್ತದೆ. ಪಿ. ಡಬ್ಲ್ಯೂ. ಡಿ. ಇನ್‌ವೆಸ್ಟಿಗೇಷನ್ ಮಾಡಿ ಪ್ಲಾನ್ ತಯಾರ್ಮಾಡುತ್ತಾರೆ. ಕೆಲಸ ಎಗ್ಜಿಕ್ಯೂಟ್ ಆಗುವುದನ್ನು ಸೂಪರ್‌ವೈಜು ಮಾಡುತ್ತಾರೆ. ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ ಈ ಕೆಲಸ ತೆಗೆದುಕೊಳ್ಳಬೇಕೆಂಬ ಇನ್ನೊಂದು ಸ್ಕೀಂ ಇದೆ. ಇದರಲ್ಲಿ ಬಾವಿಗೆ ಇಷ್ಟು ರೂಪಾಯಿ ಎಂದು ಹಣ ಕೊಡುತ್ತೇವೆ. ಕುಡಿಯುವ ನೀರಿನ ಬಾವಿ ಸಲುವಾಗಿ ಎಲ್ಲ ಸಹಾಯ ಕೊಡಲಾಗುತ್ತಿದೆ.

———

1-00 P. M.

Cultivation of the Land belonging to Chatra Inam in Gulur Hobli, Tumkur Taluk.

* Q.—252. Sri K. LAKKAPPA (Hebbur).—

Will the Government be pleased to state :—

(a) the number of persons cultivating the land belonging to Chatra Inam in Survey No. 3 at Kondapura and in Survey Nos. 20,13,17 at Kallumata in Gulur Hobli, Tumkur Taluk ;